ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY
(Accredited by NAAC with 'A' Grade)

ಕ್ರಮಾಂಕ/ No. : ಮಂ.ವಿ/ಎಸಿಸಿ/ಎಎಫ್ಎಫ್/ ಸಿಆರ್ 1/2020-21/ಎ1

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574 199
Office of the Registrar
Mangalagangothri – 574 199

ದಿನಾಂಕ/Date: 23/07/2020

ಸುತ್ತೋಲೆ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳು /ಹೊಸದಾಗಿ ಪ್ರಾರಂಭಿಸಲಿರುವ ಕಾಲೇಜುಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಕುರಿತು.

ಉಲ್ಲೇಖ: 1) ಸರಕಾರದ ಆದೇಶ ಸಂ. ಇಡಿ 34 ಇಜಿ ಒವಿ 2020 (ಭಾಗ – 2), ಬೆಂಗಳೂರು ದಿನಾಂಕ 22/06/2020
2) ಈ ಕಛೇರಿ ಸುತ್ತೋಲೆ ಸಂ: ಮಂವಿ/ಎಸಿಸಿ/ಓನ್-ಅಫಿ/ಸಿಆರ್41/2020-21/ಎ1 ದಿನಾಂಕ: 1/7/2020
3) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 22/07/2020

~~~~~

ಶೈಕ್ಷಣಿಕ ವರ್ಷ 2020-21ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳು/ಹೊಸದಾಗಿ ಪ್ರಾರಂಭಿಸಲಿರುವ ಕಾಲೇಜುಗಳ ಹೊಸ ಸಂಯೋಜನೆ, ವಿಸ್ತರಣಾ ಸಂಯೋಜನೆ, ಮುಂದುವರಿಕಾ ಸಂಯೋಜನೆ, ಶಾಶ್ವತ ಸಂಯೋಜನೆ, ಹೊಸ ವಿಷಯ ಅಳವಡಿಸುವುದು/ಬದಲಾಯಿಸುವುದು, Division of Faculty, ವಿದ್ಯಾರ್ಥಿ ಪ್ರವೇಶಾತಿ ಮಿತಿ ಹೆಚ್ಚಳ, ಹೆಸರು ಬದಲಾವಣೆ, ಕಾಲೇಜುಗಳ ಸಂಯೋಜನೆ ಹಿಂಪಡೆಯುವುದು/ ಮುಚ್ಚುವುದು, ಸ್ಥಳೀಯ ವಿಚಾರಣಾ ಸಮಿತಿ ರಚನೆ ಹಾಗೂ ಆಡಳಿತ ಮಂಡಳ ಬದಲಾವಣೆ ಮುಂತಾದ ಕಾರ್ಯ ಚಟುವಟಿಕೆಗಳಿಗೆ ಅನುಮೋದನೆ ನೀಡುವಾಗ ಕಡ್ಡಾಯವಾಗಿ ರಾಷ್ಟ್ರೀಯ ಮಾಹಿತಿ ಸಂಸ್ಥೆ (NIC) ಮುಂಖಾತರ ಉನ್ನತೀಕರಿಸಿರುವ ಆನ್‌ಲೈನ್ ತಂತ್ರಾಂಶದ ಮೂಲಕವೇ ಅರ್ಜಿಗಳನ್ನು ಆಹ್ವಾನಿಸಲು ಉಲ್ಲೇಖ(1)ರ ಸರಕಾರದ ಆದೇಶದಲ್ಲಿ ತಿಳಿಸಲಾಗಿರುತ್ತದೆ.

ಪ್ರಸ್ತುತ ಸರಕಾರವು ಹೊಸ Portal ಮೂಲಕ 2020-21ನೇ ಶೈಕ್ಷಣಿಕ ಸಾಲಿಗೆ ಕಡ್ಡಾಯವಾಗಿ Online ಮುಂಖಾತರವೇ ಎಲ್ಲಾ ಸಂಯೋಜನಾ ಪ್ರಕ್ರಿಯೆಯನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿರುವ ಹಿನ್ನಲೆಯಲ್ಲಿ ಕಾಲೇಜುಗಳು www.onlineaffililation.karnataka.gov.in, E-Portalನಲ್ಲಿ ಶೈಕ್ಷಣಿಕ ವರ್ಷ 2020-21ನೇ ಸಾಲಿಗೆ ತಮ್ಮ ಕಾಲೇಜಿನ ಸಂಯೋಜನೆಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಈ ಕೆಳಗೆ ತಿಳಿಸಿದ ದಿನಾಂಕಗಳಂದು ಸಲ್ಲಿಸುವಂತೆ ತಿಳಿಸಲಾಗಿದೆ. ಕಾಲೇಜುಗಳು ಈಗಾಗಲೇ ಪಾವತಿಸಿರುವ ಶುಲ್ಕವನ್ನು ಪರಿಗಣಿಸಲಾಗುವುದು.

1	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ	- 23/7/2020
2	ಹೊಸದಾಗಿ ಅರ್ಜಿ ಸಲ್ಲಿಸುವ ಕಾಲೇಜುಗಳು ಶುಲ್ಕ ಪಾವತಿಸುವ ಕೊನೆಯ ದಿನಾಂಕ	- 30/7/2020
3	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	- 3/8/2020
4	ಮುದ್ರಿತ ಪ್ರತಿಗಳನ್ನು ವಿಶ್ವವಿದ್ಯಾನಿಲಯಗೆ ಸಲ್ಲಿಸುವ ಕೊನೆಯ ದಿನಾಂಕ	- 8/8/2020

23/7/2020

ಕುಲಸಚಿವರು

ರಿಗೆ:

ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳ, ಮಂಗಳೂರು ವಿಶ್ವವಿದ್ಯಾನಿಲಯ
~~~~~